# ವರ್ಮಾ ಮತ್ತು ವಿವಾದ

ಬಾಲಿವುಡ್ ತಾರೆ ಶ್ರೀದೇವಿಯ ಬಗ್ಗೆ ನಿರ್ದೇಶಕ ರಾಮ್‌ಗೋಪಾಲ್ ವರ್ಮಾ ಸಾಕ್ಷ್ಯಚಿತ್ರವೊಂದನ್ನು ತಯಾರಿಸಲು ಸಿದ್ಧರಾಗಿದ್ದಾರಂತೆ. 'ಮಾಡಲಿ ಬಿಡಿ' ಎನ್ನುವಂತಿಲ್ಲ. ಈ ಸಾಕ್ಷ್ಯಚಿತ್ರಕ್ಕೆ ಚಿತ್ರಕಥೆ ಸಿದ್ಧಮಾಡಿ ಶ್ರೀದೇವಿಯ ಪತಿ ಬೋನಿ ಕಪೂರ್ ಕಡೆಯಿಂದ ಅನುಮತಿ ಪಡೆಯಬೇಕು. ಆ ಪ್ರಯತ್ನ ನಡೆದಿದೆ ಎನ್ನುವುದು ವರ್ಮಾ ನಿಕಟವರ್ತಿಗಳ ಹೇಳಿಕೆ. ಆದರೆ ಬೋನಿ ಕಪೂರ್ ಈ ಸಾಕ್ಷ್ಯಚಿತ್ರಕ್ಕೆ ಅನುಮತಿ ಕೊಡಬಹುದೆ? ಎನ್ನುವುದೀಗ ಕುತೂಹಲ ಕೆರಳಿಸಿರುವ ಪ್ರಶ್ನೆ.

ಅದಕ್ಕೂ ಕಾರಣಗಳಿವೆ. ಬಾಲಿವುಡ್‌ನಲ್ಲಿ ಕಳೆದ 3 ದಶಕಗಳ ಕಾಲ ರಾಣಿಯಂತೆ ಮೆರೆದ ನಟಿ ಶ್ರೀದೇವಿ. ಲಕ್ಷಾಂತರ ಅಭಿಮಾನಿಗಳಿಂದ 'ಲೇಡಿ ಅಮಿತಾಭ್' ಎನ್ನುವ ಬಿರುದು ಪಡೆದಿದ್ದ ಶ್ರೀದೇವಿ ಮದುವೆಯ ಬಳಿಕ ವೂ ಹಲವು ಅತ್ಯುತ್ತಮ ಚಿತ್ರಗಳಲ್ಲಿ ನಟಿಸಿ ಸುದ್ದಿಯಲ್ಲಿ ಇದ್ದಾಕೆ. ಆಕೆ ದುಬೈಯ ಹೋಟೆಲ್‌ನಲ್ಲಿ ಬಾತ್‌ಟಬ್‌ನಲ್ಲಿ ಬಿದ್ದು ಮೃತಪಟ್ಟ ಬಳಿಕ, ಸಹಜವಾಗಿಯೇ ಅಭಿಮಾನಿಗಳಿಂದ ಭಾವುಕ ಪ್ರತಿಕ್ರಿಯೆಗಳು ಬಂದಿವೆ. ಬಾಲಿವುಡ್‌ನ ಖ್ಯಾತ ನಾಮರೆಲ್ಲ ಸಂಯಮದಿಂದ ಜವಾಬ್ದಾರಿಯುತ ಪ್ರತಿಕ್ರಿಯೆಯನ್ನೇ ನೀಡಿದ್ದಾರೆ. ಆದರೆ ಒಬ್ಬ ರಾಮ್‌ಗೋಪಾಲ್ ವರ್ಮಾ ಮಾತ್ರ ಅತಿ ಎನ್ನಿಸುವಂತಹ ಪ್ರತಿಕ್ರಿಯೆ ನೀಡಿದ್ದರು.

'ಶ್ರೀದೇವಿ ಸಂಸಾರದ ವಿಷಯದಲ್ಲಿ ಸುಖಿಯಾಗಿರಲಿಲ್ಲ. ಆಕೆಯ ಸಾವು ಸಹಜವೂ ಆಗಿರಲಿಕ್ಕಿಲ್ಲ' ಎಂಬರ್ಥದ ವರ್ಮಾ ಪ್ರತಿಕ್ರಿಯೆ ಉದ್ಯಮದಲ್ಲಿ ಮಾತ್ರವಲ್ಲ ಹೊರಗೂ ಹಲವರ ಹುಬ್ಬು ಮೇಲೇರಿಸಿತ್ತು. ಅದರ ಜತೆಗೆ, ಶ್ರೀದೇವಿಯನ್ನು ತಾನೆಷ್ಟು ಪ್ರೀತಿಸುತ್ತಿದ್ದೆ, ಆಕೆ ಎಂತಹ ಸೌಂದರ್ಯ ದೇವತೆ ಯಾಗಿದ್ದಳು, ಆಕೆಯ ಜತೆಗೆ ಶೂಟಿಂಗ್ ಮಾಡುವಾಗ ಅನುಭವ ಹೇಗಿತ್ತು.. ಮುಂತಾಗಿ ವರ್ಮಾ ಮಾಧ್ಯಮಗಳಲ್ಲಿ ಬರೆದದ್ದು, ಮಾತನಾಡಿದ್ದು ದೊಡ್ಡ ಸುದ್ದಿಯೂ ಆಯಿತು. 2016ರ ಕೊನೆಯಲ್ಲಿ ಬಿಡುಗಡೆಯಾದ ತನ್ನ ಆತ್ಮಕಥೆ 'ಗನ್ಸ್ ಆ್ಯಂಡ್ ಥೈಸ್' ಪುಸ್ತಕದಲ್ಲೂ ವರ್ಮಾ ಶ್ರೀದೇವಿಯ ಬಗ್ಗೆ ಹೀಗೆಯೇ ಒಂದು ಪ್ರತ್ಯೇಕ ಚಾಪ್ಟರ್ ಬರೆದಿದ್ದು ಹಳೆಯ ಕಥೆ. ಆದರೆ ಸಾಮಾನ್ಯವಾಗಿ ಖ್ಯಾತ ನಟಿಯೊಬ್ಬರು ಮೃತಪಟ್ಟು, ಕುಟುಂಬದ ಸದಸ್ಯರು ದುಃಖದಲ್ಲಿರುವಾಗ ಸಹಜವಾಗಿರುವವರು ಯಾರೂ ಇಂತಹ ಮಾತುಗಳನ್ನು ಆಡುವುದಿಲ್ಲ ಎನ್ನುವುದನ್ನು ಅಲ್ಲಗಳೆಯಲಾಗದು.



ಹೀಗೆ ಎಲ್ಲೆಂದರಲ್ಲಿ ಏನೇನೋ ಮಾತನಾಡಿ ವಿವಾದಗಳನ್ನು ಸೃಷ್ಟಿಸುವುದು ವರ್ಮಾಗೆ ಹಿಂದಿನಿಂದಲೂ ಬಂದ ಅಭ್ಯಾಸ ಎನ್ನುವವರಿದ್ದಾರೆ. ಶ್ರೀದೇವಿ ಕುರಿತ ತನ್ನ ಭಾವನೆಗಳೆಲ್ಲವನ್ನೂ ಹಸಿ ಹಸಿಯಾಗಿ ಸಾರ್ವಜನಿಕವಾಗಿ ಹಂಚಿಕೊಂಡಿರುವುದರಿಂದಲೇ ನಾಳೆ ಆಕೆಯ ಬಗ್ಗೆ ಸಾಕ್ಷ್ಯಚಿತ್ರ ಮಾಡುವಾಗ ವರ್ಮಾ ಇನ್ನೇನಾದರೂ ಅನಾಹುತ ಮಾಡಬಹುದು ಎಂಬ ಅನುಮಾನ ಶ್ರೀದೇವಿಯ ಕುಟುಂಬದವರಿಗೆ ಬಂದರೆ ಅದು ಸಹಜವೇ.

ಸಾರ್ವಜನಿಕ ಹೇಳಿಕೆಗಳನ್ನು ಕೊಡುವಾಗ ವರ್ಮಾ ಅತಿಶಯೋಕ್ತಿಗಳನ್ನು ಬಳಸುವುದು ಪ್ರಚಾರ ತಂತ್ರ ಆಗಿರಬಹುದು. ಆದರೆ ಹಾಗೆ ಮಾಡುವು ದರಿಂದ ಜನರ ಮಧ್ಯೆ ಹಾಸ್ಯಾಸ್ಪದ ಆಗುವುದೂ ನಡೆದಿದೆ. ಕೆಲವು ವಾರಗಳ ಹಿಂದೆ ತಮಿಳು ಸೂಪರ್‌ಸ್ಟಾರ್ ರಜನಿಕಾಂತ್ ಹೊಸ ಪಕ್ಷವನ್ನು ಪ್ರಕಟಿಸಿದಾಗ ಇದೇ ವರ್ಮಾ, 'ರಜನಿಕಾಂತ್ ಪ್ರಧಾನಿಯಾದರೆ ಮಾತ್ರ ಭಾರತ ಅಮೆರಿಕ ದಂತೆ ಬೆಳಗುತ್ತದೆ' ಎಂದಿದ್ದರು. ತೆಲುಗಿನ ಇನ್ನೊಬ್ಬ ಸೂಪರ್‌ಸ್ಟಾರ್ ಪವನ್ ಕಲ್ಯಾಣ್ ಹೊಸ ಪಕ್ಷ 'ಜನಸೇನಾ' ಕಟ್ಟಿದಾಗ ವರ್ಮಾ ಟೀಕೆಯ ಮಳೆ ಸುರಿಸಿದ್ದುಂಟು. 'ಪವನ್ ಕಲ್ಯಾಣ್‌ಗೆ ಪಕ್ಷ ಕಟ್ಟುವುದು ಗೊತ್ತಿಲ್ಲ. ಈತನ ಪಕ್ಷ ಈತನ ಅಣ್ಣ ಚಿರಂಜೀವಿಯ ಪಕ್ಷದಂತೆಯೇ ಕೊನೆಗೊಳ್ಳಲಿದೆ' ಎನ್ನುವುದು ವರ್ಮಾ ಟೀಕೆಯಾಗಿತ್ತು. ಚಿರಂಜೀವಿ ಕಟ್ಟಿದ ಪಕ್ಷ ಆರಂಭದ ಚುನಾವಣೆ ಯಲ್ಲಿ ಸ್ಪರ್ಧಿಸಿ 20ಕ್ಕೂ ಹೆಚ್ಚು ಶಾಸಕರನ್ನು ಗೆಲ್ಲಿಸಿಕೊಂಡರೂ, ಕೊನೆಗೆ ಕಾಂಗ್ರೆಸ್ ಪಕ್ಷದಲ್ಲಿ ವಿಲೀನಗೊಂಡಿತ್ತು.

'ರಾಂಗೋಪಾಲ್ ವರ್ಮಾ ವಿಕ್ಷಿಪ್ತ ಮನಸ್ಸಿನ ವ್ಯಕ್ತಿ, ಮಹಿಳೆಯರ ಬಗ್ಗೆ ಯಂತೂ ಗೌರವವೇ ಇಲ್ಲ' ಎನ್ನುವುದು ಹಳೆಯ ಆರೋಪ. ಆತ ಇತ್ತೀಚೆಗೆ ನಿರ್ದೇಶಿಸಿದ ನೀಲಿ ಚಿತ್ರವೊಂದು ಕೂಡಾ ಈ ಆರೋಪವನ್ನೇ ಪುಷ್ಟೀಕರಿಸು ವಂತಿದೆ. ಇಂಗ್ಲಿಷ್ ನೀಲಿ ಚಿತ್ರಗಳ ನಾಯಕಿ ಮಿಯಾ ಮಲ್ಕೊವಾ ನಟಿಸಿದ ಈ ಚಿತ್ರಕ್ಕೆ ಸಂಬಂಧಿಸಿ ಈಗಾಗಲೆ ವರ್ಮಾ ವಿರುದ್ಧ ಸೈಬರ್ ಕಾಯ್ದೆಯ ಸೆಕ್ಷನ್ 67ರ ಪ್ರಕಾರ ಮೊಕದ್ದಮೆ ದಾಖಲಾಗಿದೆ. ಪೊಲೀಸರು ವರ್ಮಾಗೆ ಹಲವು ಪ್ರಶ್ನೆಗಳನ್ನು ಕೇಳಿ ವಿಚಾರಣೆ ನಡೆಸಿದ್ದೂ ಆಗಿದೆ. ಭಾರತದ ಕಾಯ್ದೆಗಳ ಪ್ರಕಾರ, ಇಲ್ಲಿ ನೀಲಿಚಿತ್ರಗಳನ್ನು ಚಿತ್ರೀಕರಿಸುವಂತಿಲ್ಲ. ಮಿಯಾ ಮಲ್ಕೋವಾ ಹೈದರಾಬಾದ್‌ಗೆ ಬಂದಿಳಿದ ಬಗ್ಗೆ ಸಾಕ್ಷ್ಯಗಳಿವೆ. ಹೈದರಾಬಾದ್‌ನ ಪಂಚತಾರಾ ಹೋಟೆಲೊಂದರಲ್ಲಿ ಈ ಸಿನಿಮಾ ಶೂಟಿಂಗ್ ಆಗಿದೆ ಎನ್ನುವುದು ಆರೋಪ. 'ಈ ಚಿತ್ರದ ಶೂಟಿಂಗ್ ನಡೆದಿರುವುದು ಯೂರೋಪ್‌ನಲ್ಲಿ. ಮಿಯಾ ಮಲ್ಕೊವಾ ಬೇರೆ ಕೆಲಸಗಳಿಗೆ ಸಂಬಂಧಿಸಿ ಹೈದರಾಬಾದ್‌ಗೆ ಆಗಮಿಸಿದ್ದಳು' ಎನ್ನುವುದು ವರ್ಮಾ ಪೊಲೀಸರಿಗೆ ನೀಡಿರುವ ಹೇಳಿಕೆ. ಈ ಮಧ್ಯೆ ಈ ಚಿತ್ರ ಇಂಟರ್‌ನೆಟ್‌ನಲ್ಲಿ ಬಿಡುಗಡೆ ಕಂಡಿರುವುದೂ ವರ್ಮಾ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪೊಲೀಸರ ಕೈಬಲಪಡಿಸಿದೆ.

ಈ ಎಲ್ಲ ಆರೋಪಗಳ ಬಗ್ಗೆ ವರ್ಮಾ ಹೆಚ್ಚು ತಲೆಕೆಡಿಸಿಕೊಂಡಿಲ್ಲ. 'ಟ್ವಿಟ್ಟರ್' ನಲ್ಲಿ ಆತ ಇತ್ತೀಚೆಗೆ, 'ಜನ ನನ್ನನ್ನು ಮಾನಹಾನಿ ಮಾಡುವವನೆಂದು ದೂಷಿಸುತ್ತಿದ್ದಾರೆ. ನಾನೊಬ್ಬ ವಿಕೃತ ಮನುಷ್ಯ, ಸೈಕೊ, ಟೆರರಿಸ್ಟ್ ಎಂದೆಲ್ಲ ಹೇಳುತ್ತಿದ್ದಾರೆ. ಇದೆಲ್ಲ ವಿಷಯಗಳನ್ನು ನನ್ನ ವಕೀಲರು ನೋಡಿಕೊಳ್ಳುತ್ತಿದ್ದಾರೆ. ಈ ವಿಷಯದಲ್ಲಿ ಹೆಚ್ಚು ಮಾತನಾಡಿದರೆ ನ್ಯಾಯಾಂಗ ನಿಂದನೆ ಆಗಬಹುದು' ಎಂದು ಬರೆದದ್ದೂ ಸುದ್ದಿಯಾಗಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65